ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) 1999-2000ದ ಅಂತ್ಯದವರೆಗೆ ಕರ್ನಾಟಕ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಕೊರೆಯಲಾದ 435 ಕೊಳವೆಬಾವಿಗಳಿಗೆ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಕೊರೆಯಲಾದ 381 ಕೊಳವೆಬಾವಿಗಳಿಗೆ ಮತ್ತು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಕೊರೆಯಲಾದ 164 ಬಾವಿಗಳಿಗೆ ವಿದ್ಯುದ್ದೀಕರಣವಾಗಿರುವುದಿಲ್ಲ. ಈ ಎಲ್ಲಾ ಕೊಳವೆ ಬಾವಿಗಳಿಗೆ ವಿದ್ಯುದ್ದೀಕರಣಗೊಳಿಸುವ ಕಾರ್ಯವು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.

(ಆ) 2000-2001ನೇ ಸಾಲಿನ ಆಯವ್ಯಯದಲ್ಲಿ ಗಂಗಾ ಕಲ್ಯಾಣ ಯೋಜನೆಗೆ ಒದಗಿಸಿರುವ ಅನುದಾನಕ್ಕನುಗುಣವಾಗಿ ಜಿಲ್ಲಾವಾರು ಗುರಿಗಳನ್ನು ನಿಗದಿಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ಅಧಿಕಾರಿಗಳಿಗೆ ನೀಡುತ್ತಿರುವ ಕಿರುಕುಳ

2082 (2446) : ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(1) ರೇಷ್ಮೆ ಇಲಾಖೆ ರೇಷ್ಮೆ ಅಭಿವೃದ್ಧಿ ಆಯುಕ್ತರು ಹಾಗೂ ಹೆಚ್ಚಿನ ನಿರ್ದೇಶಕರು, ಇಲಾಖೆ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಸ್ವಜಾತಿಯನ್ನು ಹೊರತುಪಡಿಸಿ ಉಳಿದ ಇತರೆ ಜಾತಿಯವರಿಗೆ ಹಾಗೂ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಯವರಿಗೆ ವಿನಾಕಾರಣ ಇಲಾಖೆಯ ಅಭಿವೃದ್ಧಿಯ ಕಡೆಗಣಿಸಿ ದಿನನಿತ್ಯ ಕಿರುಕುಳ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(2) ಸದರಿ ಆಯುಕ್ತರ ಹಾಗೂ ಹೆಚ್ಚಿನ ನಿರ್ದೇಶಕರು ಸ್ವಜಾತಿಯ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಮಹತ್ತರವಾದ ಹುದ್ದೆಗಳಿಗೆ ನಿಯೋಜಿಸಿ, ಇಲಾಖೆಯಲ್ಲಿ ಅವ್ಯವಹಾರ ಮಾಡಲು ಹೆಚ್ಚಿಗೆ ಅವಕಾಶ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(3) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(1) ಇಲ್ಲ.

(2) ಇಲ್ಲ.

(3) ಉದ್ಭವಿಸುವುದಿಲ್ಲ.

ರೇಷ್ಮೆ ವಸ್ತ್ರ ಮಾರಾಟಮಳಿಗೆ ನವೀಕರಣದಲ್ಲಿ ನಡೆದ ಅವ್ಯವಹಾರ

2083 (2444) : ಶ್ರೀ ಶಿವಪ್ಪ ಬಿ.ಬಿ. (ಸಕಲೇಶಪುರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?